'ಮಾವು' ಎಂಬ ಹೆಸರೇ ಒಂಥರಾ ಪುಳಕ ಹುಟ್ಟಿಸುತ್ತದೆ. ಒಣಗಿದ ಬಾಯಲ್ಲೂ ನೀರೂರಿಸುವ ಸವಿರುಚಿಯ ಈ ಹಣ್ಣಿನ ವಿಶೇಷವೇ ಅಂತಹದ್ದು. ಪ್ರಕೃತಿಯು ವರ್ಷವಿಡೀ ಋತುವಿಗೆ ಅನುಗುಣವಾಗಿ ನೀಡುವ ವಿವಿಧ ಹಣ್ಣುಗಳಲ್ಲಿ ಮಾವಿಗೆ ವಿಶೇಷ ಸ್ಥಾನ. ಅದಕ್ಕೆ 'ಹಣ್ಣುಗಳ ರಾಜ' ಎಂಬ ವಿಶೇಷಣವೂ ಇದಕ್ಕಿದೆ. ಹಣ್ಣುಗಳ ಪೈಕಿ ಮಾವಿನಷ್ಟು ರುಚಿ ಹಾಗೂ ಮುದವನ್ನು ಮತ್ಯಾವ ಹಣ್ಣೂ ನೀಡಲಾರದು. ಮಾವಿನ ಋತು ಶುರುವಾದರೆ ಅದೊಂದು ರೀತಿಯಲ್ಲಿ ಜಾತ್ರೆಯ ಸಂಭ್ರಮದಂತೆ. ಎಷ್ಟು ಸವಿದರೂ ಮತ್ತೆ ಮತ್ತೆ ಬೇಕೆನಿಸುವ, ಮಕ್ಕಳಿಂದ ವಯಸ್ಕರವರೆಗೆ ಚಪ್ಪರಿಸಿಕೊಂಡು ತಿನ್ನುವ ಹಣ್ಣಿನ ಸುವಾಸನೆ, ಸ್ವಾದ, ರುಚಿಯನ್ನು ಬಲ್ಲವನೇ ಬಲ್ಲ.

ಜನಪದರ ಪ್ರಕಾರ ವೈಶಾಖ ಮಾಸದ ತದಿಗೆಯಿಂದ ಜೂನ್ ತಿಂಗಳ ಮೃಗಶಿರ ನಕ್ಷತ್ರದ ಮಳೆ ಬರುವವರೆಗೂ ಮಾವು ಸವಿಯಬಹುದು. ಬಿಸಿಲುಂಡು ಬಂಗಾರ ಬಣ್ಣಕ್ಕೆ ತಿರುಗಿದ ಹಣ್ಣುಗಳನ್ನು ಕೈಯಲ್ಲಿಡಿದು ಸವಿಯುವುದೇ ಚೆಂದ. ಹಲ್ಲಿನಲ್ಲೇ ಸಿಪ್ಪೆ ಬಿಡಿಸಿಕೊಂಡು ಕೇಸರಿ ಬಣ್ಣದಲ್ಲಿರುವ ತಿರುಳನ್ನು ಗೋಟೆ ಕಾಣುವವರೆಗೆ ಸವಿಯುವಾಗ ಸಿಗುವ ಆನಂದ ಹೇಳತೀರದು. ಕೈಯಲ್ಲಿರುವ ಮಾವಿನ ರಸವು ಮೊಣಕೈ ತುದಿಯಂಚಿಗೆ ಬಂದು ಸೋರುತ್ತಿದ್ದರೂ, ಅದರ ಪರಿವೇ ಇಲ್ಲದೆ ಮಾವಿನ ಸವಿಯಲ್ಲಿ ಮುಳುಗುವವರೆಷ್ಟೊ. ಗೋಟೆಯು ಬಿಳಿ ಬಣ್ಣಕ್ಕೆ ತಿರುಗಿ ಬಿಳಿಚಿಕೊಳ್ಳುವವರೆಗೆ ಹಣ್ಣು ಸವಿಯುವುದೇ ಒಂಥರಾ ಚಂದ. ಇನ್ನು ಮಾಗಿದ ಹಣ್ಣುಗಳನ್ನು ಹಿಂಡಿ ಹಿಸುಕಿ ಶೀಕರಣೆ ಮಾಡಿ ಹೋಳಿಗೆಯೊಂದಿಗೆ ಉಣ್ಣುವಾಗಿನ ಸಂಭ್ರಮಕ್ಕೆ ಬೇರೆ ಸಾಟಿಯೇ ಇಲ್ಲ.

**3,76,189 ಹೆಕ್ಟೇರ್**
ರಾಜ್ಯದಲ್ಲಿ ಹಣ್ಣುಗಳನ್ನು ಬೆಳೆಯುವ ಪ್ರದೇಶ

## ಮಾವಿನ ರಾಜಧಾನಿ ಭಾರತ

ಮಾವಿನ ರುಚಿಯು ವಿಶ್ವವ್ಯಾಪಿಯಾದುದು. ತರಹೇವಾರಿ ಮಾವಿನ ತಳಿಗಳನ್ನು ಪ್ರತಿ ವರ್ಷ ವಿಶ್ವಕ್ಕೆ ಕೊಡುವ ದೇಶಗಳಲ್ಲಿ ಭಾರತದ್ದು ಅಗ್ರಸ್ಥಾನ. ವಿಶ್ವದ ಒಟ್ಟು ಮಾವು ಉತ್ಪಾದನೆಗೆ ಮಾವಿನ ರಾಜಧಾನಿಯಾದ ಭಾರತದ ಕೊಡುಗೆ ಶೇ 59ರಷ್ಟು. ಸುವಾಸನೆಭರಿತ ಮತ್ತು ರುಚಿಕರ ಮಾವಿನ ತಳಿಗಳಿಗೆ ಭಾರತ ಹೆಸರುವಾಸಿಯಾಗಿದೆ. ದೇಶದಲ್ಲಿ ಸುಮಾರು 1,500 ಮಾವಿನ ಪ್ರಭೇದಗಳಿವೆ. ಅದರಲ್ಲಿ ಸಾವಿರದಷ್ಟು ವಾಣಿಜ್ಯ ಪ್ರಭೇದಗಳಿದ್ದು, ಪ್ರತಿ ವರ್ಷ 20 ಮಿಲಿಯನ್ ಟನ್ ಮಾವು ದೇಶದಲ್ಲಿ ಉತ್ಪಾದನೆಯಾಗುತ್ತದೆ. ಉತ್ತರ ಪ್ರದೇಶವು ಅತಿ ಹೆಚ್ಚು ಮಾವು ಉತ್ಪಾದಿಸುವ ರಾಜ್ಯವಾಗಿದೆ. ಪ್ರತಿ ವರ್ಷ 4 ಮಿಲಿಯನ್ ಟನ್ ಮಾವು ಈ ರಾಜ್ಯವೊಂದರಲ್ಲೇ ಉತ್ಪಾದನೆಯಾಗುತ್ತದೆ. ಅಲ್ಫಾನ್ಸೊ ತಳಿಯು ಹೆಚ್ಚಿನ ಬ್ರಿಕ್ಸ್ ಅಂಶ, ಸುವಾಸನೆಯಿಂದಾಗಿ ದೇಶದ ಅತ್ಯಂತ ಸಿಹಿಯಾದ ಮಾವು ಎಂದು ಹೆಸರುವಾಸಿಯಾಗಿದೆ.

## ರಾಜ್ಯದಲ್ಲಿ ರಾಮನಗರ ಮೊದಲು

ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಲ್ಲಿನ ಮಾವಿನ ಋತು ಶುರುವಾಗುವುದೇ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯಿಂದ. ಬೆಟ್ಟಗುಡ್ಡಗಳಿಂದ ಆವೃತ್ತವಾಗಿರುವ ಜಿಲ್ಲೆಯು ಬಾದಾಮಿ ತಳಿಗೆ ಪ್ರಸಿದ್ಧವಾಗಿದೆ. ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಹಾಗೂ ಹಾರೋಹಳ್ಳಿಯಲ್ಲೂ ಮಾವು ಬೆಳೆಯಲಾಗುತ್ತದೆ. ಡಿಸೆಂಬರ್ ತಿಂಗಳಿಂದಲೇ ಮರಗಳಲ್ಲಿ ಹೂವು ಬಿಟ್ಟು, ಕಾಯಿಗಳು ಕಟ್ಟತೊಡಗುತ್ತವೆ. ಮಾರ್ಚ್ ಅಂತ್ಯದೊಳಗೆ ಕೊಯ್ಲು ಶುರುವಾಗಿ, ಏಪ್ರಿಲ್ ತಿಂಗಳಿಂದಲೇ ಜಿಲ್ಲೆಯ ಹಣ್ಣುಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ಎರಡೂವರೆ ತಿಂಗಳು ಮಾವಿನ ಅಬ್ಬರ ಮೇ ತಿಂಗಳಾಂತ್ಯಕ್ಕೆ ಅಂತ್ಯಗೊಳ್ಳುತ್ತದೆ. ಬಾದಾಮಿ ಜೊತೆಗೆ ಸೇಂಧೂರ, ನೀಲಂ, ಮಲ್ಲಿಕಾ, ತೋತಾಪುರಿಯನ್ನು ಸಹ ಸ್ವಲ್ಪಮಟ್ಟಿಗೆ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಸುಮಾರು 31,723 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. 30 ಸಾವಿರಕ್ಕೂ ಹೆಚ್ಚು ರೈತರು ಮಾವು ಬೆಳೆಯುತ್ತಾರೆ.

'ರಾಮನಗರ ಜಿಲ್ಲೆಯ ಮಾವು ಹೊರರಾಜ್ಯಗಳಿಗಷ್ಟೇ ಅಲ್ಲದೆ ವಿದೇಶಗಳಿಗೂ ರಫ್ತಾಗುತ್ತದೆ. ಮರಗಳಲ್ಲಿ ಹೂ ಬಿಡುತ್ತಿದ್ದಂತೆ ವ್ಯಾಪಾರಿಗಳು ರೈತರ ಬಳಿಗೆ ತೆರಳಿ, ಮುಂಗಡ ಹಣ ಕೊಟ್ಟು ಇಡೀ ತೋಟವನ್ನು ವಹಿಸಿಕೊಳ್ಳುತ್ತಾರೆ. ಕಾಯಿಗಳು ಬಲಿಯುತ್ತಿದ್ದಂತೆ ಅವರೇ ಕೊಯ್ಲು ಮಾಡಿಕೊಂಡು ಮಂಡಿಗೆ ಸಾಗಿಸುತ್ತಾರೆ. ಕೆಲವರು ಸ್ಥಳೀಯವಾಗಿಯೇ ಕಾಯಿಗಳನ್ನು ಹಣ್ಣಾಗಿಸಿ ಮಾರಾಟ ಮಾಡಿದರೆ, ಉಳಿದವರು ಫ್ಯಾಕ್ಟರಿಗಳಿಗೆ ಕಳಿಸುತ್ತಾರೆ. ಇಲ್ಲಿ ಮಾವಿನ ಋತು ಶುರುವಾದ ಬಳಿಕ ಕೋಲಾರ, ಧಾರವಾಡ ಸೇರಿದಂತೆ ರಾಜ್ಯದ ಇತರ ಭಾಗಗಳ ಮಾವುಗಳು ಮಾರುಕಟ್ಟೆಗೆ ಬರತೊಡಗುತ್ತವೆ' ಎನ್ನುತ್ತಾರೆ ಮಾವು ಬೆಳೆಗಾರ ಬಿಳಗುಂಬ ವಾಸು.



ಮಾರಾಟಕ್ಕೆ ಸಿದ್ಧವಾಗಿರುವ ತೋತಾಪುರಿ ಮಾವು
ಚಿತ್ರ: ಚಂದ್ರೇಗೌಡ



ದೊಡ್ಡ ಗಾತ್ರದ ಹಣ್ಣುಗಳೊಂದಿಗೆ ಮಾವಿನ ಮಂಡಿ ವ್ಯಾಪಾರಿಗಳು
ಚಿತ್ರ: ಚಂದ್ರೇಗೌಡ



ಕಣ್ಮನ ಸೆಳೆಯುವ ಸೇಂಧೂರ ಹಣ್ಣುಗಳು
ಚಿತ್ರ: ಚಂದ್ರೇಗೌಡ

## ತಗ್ಗುತ್ತಿದೆ ಮಾವು ಪ್ರದೇಶ

'ರಾಜಧಾನಿಗೆ ಹೊಂದಿಕೊಂಡಂತಿರುವ ಜಿಲ್ಲೆಯು ಇತ್ತೀಚೆಗೆ ಕೈಗಾರಿಕೆ ಸೇರಿದಂತೆ ನಗರೀಕರಣಕ್ಕೆ ಹೆಚ್ಚು ಒಳಗಾಗಿರುವುದರಿಂದ ಮಾವು ಬೆಳೆಯುವ ಪ್ರದೇಶವೂ ಕಡಿಮೆಯಾಗುತ್ತಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದಾಗಿ ಬೆಳೆಗಾರರು